

## 'ಮಾನಸಿಕ ಆರೋಗ್ಯ'ದ ಕಾನೂನಿನೆಡೆಗೆ..

1946ರ ಭೋರ್ ಸಮಿತಿ ಒಂದು ಮುಖ್ಯ ಅಂಶವನ್ನು ಎತ್ತಿ ಹಿಡಿಯಿತು. '19 ಮಾನಸಿಕ ಆಸ್ಪತ್ರೆಗಳಲ್ಲಿ 10,181 ಹಾಸಿಗೆಗಳಿವೆ. ಅವುಗಳಿಗೂ ಮೀರಿ ಹೆಚ್ಚಿನ ಸಂಖ್ಯೆಯ ರೋಗಿಗಳಿದ್ದಾರೆ. ಈ ಆಸ್ಪತ್ರೆಗಳು ರೋಗಿಗಳನ್ನು 'ಬಂಧಿಸಿ'ಡಲು ಮಾತ್ರ ಸಿದ್ಧವಾಗಿವೆ. ಅವುಗಳಲ್ಲಿರುವ ಚಿಕಿತ್ಸಾ ಪದ್ಧತಿ, ವಾತಾವರಣ ಅಮಾನವೀಯವಾಗಿವೆ' ಎಂದು ಸಮಿತಿ ಒತ್ತಿ ಹೇಳಿತು. ಇದನ್ನೇ ಎತ್ತಿಹಿಡಿದು ಭಾರತೀಯ ಮನೋವೈದ್ಯಕೀಯ ಸಂಘ ಸರ್ಕಾರವನ್ನು 'ಮಾನಸಿಕ ಆರೋಗ್ಯದ ಕಾನೂನು' ತರುವಂತೆ ಆಗ್ರಹಿಸಿತು. ಆದರೂ ಮುಂದಿನ 20 ವರ್ಷಗಳವರೆಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

20 ವರ್ಷಗಳಲ್ಲಿ ಅಂದರೆ 1960ರಿಂದ 1980ರವರೆಗೆ ಮನೋವೈದ್ಯಕೀಯ ರಂಗದಲ್ಲಿ ಆದ ಆವಿಷ್ಕಾರಗಳು ಬೆಟ್ಟದಷ್ಟು. ಮನೋರೋಗವೂ ವೈಜ್ಞಾನಿಕವಾದ ತಳಹದಿಯುಳ್ಳ, ಗುಣಮುಖವಾಗಬಲ್ಲ, ಬೇರೆಲ್ಲಾ ರೋಗಗಳಂತೆ ಸಹಜವಾದ ವಾತಾವರಣದಲ್ಲಿ ಚಿಕಿತ್ಸೆಗೆ ಒಳಪಡಿಸಬಹುದಾದ ಕಾಯಿಲೆ ಎಂಬುದು ಸಂಶೋಧನೆಗಳಿಂದ ಸಿದ್ಧವಾದಂತಹ ಅವಧಿ ಇದು. ಮನೋವೈದ್ಯರ, ಸ್ವಯಂ ಸೇವಾ ಸಂಸ್ಥೆಗಳ, ಮನೋರೋಗವನ್ನು ಸ್ವತಃ ಅನುಭವಿಸಿದ ರೋಗಿಗಳ ಸತತ ಪ್ರಯತ್ನದ ಫಲವಾಗಿ ಮಾನಸಿಕ ಆರೋಗ್ಯ ಕಾನೂನು Mental health act 1987 ಜನ್ಮ ತಳೆಯಿತು. ಇದರಲ್ಲಿ ಮಾನಸಿಕ ಅನಾರೋಗ್ಯ ಚಿಕಿತ್ಸೆಯ ಆಧುನಿಕ ಪರಿಕಲ್ಪನೆಗಳನ್ನು ಅಳವಡಿಸಲಾಯಿತು. ಆಸ್ಪತ್ರೆಗೆ ದಾಖಲಿಸುವ, ಕಳಿಸುವ (ಡಿಸ್ಚಾರ್ಜ್) ಪ್ರಕ್ರಿಯೆಗಳನ್ನು ಸರಳೀಕರಿಸಲಾಯಿತು. ರೋಗಿಗಳ ಹಕ್ಕುಗಳನ್ನು ನಿಖರವಾಗಿ ಹೇಳಲಾಯಿತು. ಮಾನಸಿಕ ಆರೋಗ್ಯ ಪ್ರಾಧಿಕಾರ (Mental health authority)ವೊಂದನ್ನು ಸ್ಥಾಪಿಸಲಾಯಿತು. ಒಟ್ಟಿನಲ್ಲಿ ಈ ಕಾನೂನಿನ ಮುಖ್ಯ ಉದ್ದೇಶ ರೋಗಿಗಳ ಆರೈಕೆ ಮತ್ತು ಕಾಳಜಿಯಾಗಿತ್ತು. ಅವರನ್ನು ಬಂಧಿಸಿಡುವುದಾಗಿರಲಿಲ್ಲ! 1987ರಲ್ಲಿ ರೂಪಿಸಿದರೂ, ಇದು ನಿಜವಾಗಿ ಜಾರಿಗೆ ಬಂದದ್ದು 1993ರಲ್ಲಿ!

ಕಾನೂನು ನಿಜವಾದ ಅರ್ಥದಲ್ಲಿ ಜಾರಿಗೆ ಬರಬೇಕಾದರೆ, ಜನರು ಅದನ್ನು ಪಾಲಿಸಬೇಕು! ಕಾನೂನನ್ನು ಮುರಿಯುವುದು ಒಂದೆಡೆಯಾದರೆ, ಕಾನೂನನ್ನು ನಿರ್ಲಕ್ಷಿಸುವುದು ಇನ್ನೊಂದೆಡೆ. ಮಾನಸಿಕ ಅಸ್ವಸ್ಥರ ಬಗೆಗಿನ ನಮ್ಮ ಮೂಲಭೂತ ಧೋರಣೆ ಇಲ್ಲಿ ಬಹು ಮುಖ್ಯ. ಮನೋವೈದ್ಯಕೀಯ ರಂಗ ಎಷ್ಟೇ ಮುಂದುವರಿದಿರಲಿ, ಮನೋರೋಗಿಗಳು ಇತರ ಎಲ್ಲಾ ರೋಗಿಗಳಂತೆ ಗುಣಮುಖರಾಗಿ ಸಹಜ ಜೀವನ ನಡೆಸುವ ದಿನಗಳು ಬಂದಿರಲಿ, ಜನರಿಗೆ ಇದರ ಅರಿವಿರದೇ ಹೋದರೆ ನಾವು ನಿಜವಾದ ಅರ್ಥದಲ್ಲಿ ಬದುಕುವುದು ಶತಮಾನಗಳ ಹಿಂದಿನ ವ್ಯವಸ್ಥೆಯಲ್ಲಿಯೇ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ 'ಯೆರವಾಡಿ' ದುರಂತ. ತಮಿಳುನಾಡಿನ 'ಯೆರವಾಡಿ' ಎಂಬ ಹಳ್ಳಿಯಲ್ಲಿ 'ದರ್ಗಾ' ಒಂದರಲ್ಲಿ ಬೆಂಕಿ ಬಿತ್ತು. ಅಲ್ಲಿದ್ದವರು ಯಾರು? ಸರಪಣಿಯಲ್ಲಿ ಬಂಧಿಸಲ್ಪಟ್ಟ ಮಾನಸಿಕ ಅಸ್ವಸ್ಥರು. ಒಂದೇ ದೊಡ್ಡ ಕಂಬಕ್ಕೆ ಸರಪಳಿಯಲ್ಲಿ ಬಂಧಿತರಾದ 28 ಜನ ಮಾನಸಿಕ ಅಸ್ವಸ್ಥರು ಸಜೀವ ದಹನಕ್ಕೆ ತುತ್ತಾದರು. ಇದಾಗಿದ್ದು ಪ್ರಾಚೀನ ಭಾರತದಲ್ಲಲ್ಲ, 21ನೇ ಶತಮಾನದಲ್ಲಿ! ಅಂದರೆ ಕಾನೂನುಗಳನ್ನು ಸರ್ಕಾರ ಮಾಡಿದ ಮೇಲೆ!

2002ರಲ್ಲಿ ನಡೆದ ಈ ದುರಂತ ಸ್ವಲ್ಪವಷ್ಟೇ ತೆರೆದಿದ್ದ ನಮ್ಮ ಕಣ್ಣನ್ನು ಮತ್ತಷ್ಟು ತೆರೆಸಿತು. ಮಾನಸಿಕ ಆರೋಗ್ಯದ ಕಾನೂನು ಹಲವು ಬದಲಾವಣೆಗಳನ್ನೇನೋ ತಂದಿತ್ತು. ಆದರೆ ಬಹಳಷ್ಟು ಅಡ್ಡಿಗಳೂ ಇದ್ದವು. 'ಮಾನಸಿಕ ಆಸ್ಪತ್ರೆ'ಗೆ ಇಟ್ಟಿದ್ದ ವ್ಯಾಖ್ಯೆ ಖಾಸಗೀ ಆಸ್ಪತ್ರೆಗಳನ್ನು ಒಳಗೊಳ್ಳುತ್ತಿರಲಿಲ್ಲ. ಖಾಸಗೀ ಸೇವೆಯನ್ನು ಆರಂಭಿಸುವುದೂ, ಮುಂದುವರಿಸುವುದೂ ಸುಲಭವಾಗಿರಲಿಲ್ಲ. ಹಾಗಾಗಿ ಸೌಲಭ್ಯಗಳಿದ್ದರೂ, ಅದು ಸುಲಭವಾಗಿ ಲಭ್ಯವಾಗದ ಸ್ಥಿತಿ. ಇದರ ಬಗ್ಗೆ ಕಾನೂನು ಮಾಡುವ,




ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ
ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450